# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1101 |
| ಸದಸ್ಯರು ಹೆಸರು | : | ಡಾ: ಆರತಿ ಕೃಷ್ಣ<br>(ನಾಮನಿರ್ದೇಶಿತರು ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12.03.2026 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಮಲೆನಾಡಿನ ಚಿಕ್ಕಮಗಳೂರು ಜಿಲ್ಲೆ, ಕಳಸದಿಂದ ಬಾಳೆಹೊನ್ನೂರಿನ ವರೆಗೆ ಭದ್ರಾ ನದಿ ಪಾತ್ರದಲ್ಲಿ ಸಣ್ಣ ವಿಮಾನವೊಂದು ಅತ್ಯಂತ ಕೆಳಮಟ್ಟದಲ್ಲಿ ಹಾರಾಟ ನಡೆಸಿ ಸಾರ್ವಜನಿಕವಾಗಿ ಆತಂಕ ಸೃಷ್ಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕದ ಜಿಲ್ಲೆಗಳಲ್ಲಿ ಕಡಿಮೆ ಎತ್ತರದಲ್ಲಿ ವೈಜ್ಞಾನಿಕ ಹಾರಾಟ ಚಟುವಟಿಕೆಯನ್ನು ಮಾಡುವ ಸೆಸ್ನಾಕಾರವಾನ್ 208(ಬಿ) ವಿಮಾನಗಳನ್ನು ಮತ್ತು ಮ್ಯಾಗ್ನೆಟಿಕ್‌ಗ್ರೇಡಿಯೋ ಮೀಟರ್ ಮತ್ತು ರೇಡಿಯೋ ಮೀಟರ್ ಸಂವೇಧಕವನ್ನು ಬಳಸಿ ಭೂ ವೈಜ್ಞಾನಿಕ ಮತ್ತು ಸಂಭಾವ್ಯ ಪ್ರದೇಶಗಳಲ್ಲಿ (O.G.P) ಖನಿಜ ನಿಕ್ಷೇಪಗಳು ಇರುವ ಪ್ರದೇಶಗಳನ್ನು ಗುರುತಿಸಲು ಎಕ್ಸ್-ಕ್ಯಾಲಿಬರ್ ಏವಿಯೇಷನ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಭಾರತ ಸರ್ಕಾರವು ಗುತ್ತಿಗೆ ನೀಡಿದ್ದು, ಅದರಂತೆ ಎಕ್ಸ್-ಕ್ಯಾಲಿಬರ್‌ಏವಿಯೇಷನ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಹಿಮಾಲಯನ್ ಹೆಲಿ ಸರ್ವೀಸ್ ಲಿಮಿಟೆಡ್, ನವದೆಹಲಿ ರವರ ಸಹಯೋಗದೊಂದಿಗೆ ಅಧಿಕೃತವಾಗಿ ಅನುಮತಿ ಪಡೆದು ಮ್ಯಾಗ್ನೇಟಿಕ್ ಗ್ರೇಡಿಯೋ ಮೀಟರ್ ಮತ್ತು ರೇಡಿಯೋ ಮೀಟರ್ ಸಂವೇಧಕವನ್ನು ಬಳಸಿ ಖನಿಜ ನಿಕ್ಷೇಪಗಳು ಇರುವ ಪ್ರದೇಶಗಳನ್ನು ಗುರುತಿಸುವ ಕಾರ್ಯವನ್ನು ಮಾಡುತ್ತಿರುತ್ತದೆ. ಈ ಬಗ್ಗೆ ಸಮೀಕ್ಷೆ ನಡೆಸಲು ದಿನಾಂಕ:13.02.2026 ರಿಂದ 31.07.2026 ರ ವರೆಗೆ ಕಾಲಾವಕಾಶವನ್ನು ನೀಡಿರುತ್ತದೆ. ಈ ಬಗ್ಗೆ ದಿನಾಂಕ: 13.02.2026 ರಂದು ಹಿಮಾಲಯನ್ ಹೆಲಿ ಸರ್ವೀಸ್ ಲಿಮಿಟೆಡ್, ನವದೆಹಲಿ ರವರು ಚಿಕ್ಕಮಗಳೂರು ಜಿಲ್ಲೆಯು ಒಳಗೊಂಡಂತೆ ವಿವಿಧ ಜಿಲ್ಲೆಗಳ ಪೊಲೀಸ್ ಅಧೀಕ್ಷಕರಿಗೆ ಮಾಹಿತಿ ನೀಡಿರುತ್ತಾರೆ. |
| ಆ. | ಸಂಚರಿಸಿದ ಈ ನಿಗೂಢ ವಿಮಾನದ ಬಗ್ಗೆ ಅಧಿಕಾರಿಗಳಿಗೆ ಯಾವುದೇ ಮಾಹಿತಿ ಇಲ್ಲವೇ; ಈ ನಿಗೂಢ ವಿಮಾನ ಎಲ್ಲಿಂದ ಬಂದಿರುತ್ತದೆ ಮತ್ತು ಇದರೊಳಗೆ ಯಾರಿದ್ದರು; ಇದರ ಉದ್ದೇಶವೇನು ಎಂಬುದು ಸದ್ಯಕ್ಕೆ ಯಕ್ಷ ಪ್ರಶ್ನೆಯಾಗಿರುವುದು ನಿಜವೇ; | |
| ಇ. | ಈ ಬಗ್ಗೆ ಸ್ಥಳೀಯ ಪೊಲೀಸ್ ಇಲಾಖೆಯಾಗಲಿ ಅಥವಾ ಅರಣ್ಯ ಇಲಾಖೆಯಾಗಲಿ ಯಾವುದೇ ಪೂರ್ಣ ಮಾಹಿತಿ ಹೊಂದಿಲ್ಲದಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಹೆಚ್ಚಿಸಿದೆ; ಅಧಿಕಾರಿಗಳಿಗೇ ಮಾಹಿತಿ ಇಲ್ಲದೆ ಹಾರಾಟ ನಡೆಸಿರುವುದು ಹತ್ತಾರು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿರುವುದರಿಂದ, ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ? | ಮೇಲೆ ವಿವರಿಸಿದಂತೆ ಜಿಲ್ಲಾ ಪೊಲೀಸ್ ಮುಖ್ಯಸ್ಥರಿಗೆ ಮಾಹಿತಿ ಇದ್ದು, ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. |

ಹೆಚ್‌ಡಿ 148 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.